
ಕಥೆ



# ಮಾಯಾ ಗುಂಡಿ

■ ಗುರುರಾಜ್ ಸನಿಲ್

ತನಗೆ ಕಿರಿಕಿರಿಯೆನಿಸುವ ಯಾವುದೇ ಒಂದು ಸಣ್ಣಪುಟ್ಟ ವಿಚಾರ ಸಿಕ್ಕರೂ ಸಾಕು, ತಕ್ಷಣ ಸಿಡಿಮಿಡಿಗೊಂಡು ಜಗಳಕ್ಕೇ ಮುಂದಾಗುತ್ತಿದ್ದ ಪತ್ನಿ ದಿವ್ಯಾಳ ಮೇಲೆ ಅಜಯ್ ಈಚೀಚೆಗೆ ರೋಸಿ ಹೋಗಿದ್ದ. ತಟ್ಟನೆ ರೌದ್ರಾವತಾರ ತಾಳಿದಳೆಂದರೆ ಪೂರ್ವಾಪರ ಒಂದೂ ಯೋಚಿಸದೆ ಜಗಳಕ್ಕೇ ನಿಂತು, ಅದು ಕೊನೆ ಮುಟ್ಟುತ್ತಲೇ ಮುಸುಕೆಳೆದು ಮಲಗಿ ಬಿಡುತ್ತಾಳೆ ಅಥವಾ ಉಪವಾಸ ಕೂತು ಇಡೀ ಮನೆ ಮಂದಿಯ ನೆಮ್ಮದಿಯನ್ನು ಕ್ಷಣಾರ್ಧದಲ್ಲಿ ಕದಡಿ ಬಿಡುವಂಥ ಅವಳ ವರ್ತನೆಯಿಂದ ಅವನ ಮನಸ್ಸು ತೀರಾ ಜಿಗುಪ್ಸೆಗೊಂಡಿತ್ತು. ಈಗೀಗ ಅಂಥ ಸಂದರ್ಭ ಬಂದಾಗಲೆಲ್ಲಾ ಒಂದಷ್ಟು ಹೊತ್ತು ಅವಳಿಂದ ದೂರ ಉಳಿದು ಬಿಡುವುದೇ ಸೂಕ್ತವೆನಿಸಿ, ಯಾರ ಮೇಲಿನ ಕೋಪಕ್ಕೋ, ಯಾವ ಸೋಲಿಗೋ ಎದ್ದು ಗೊತ್ತು ಗುರಿಯಿಲ್ಲದೆ ಎತ್ತಲೋ ತೆಪ್ಪಗೆ ಹೊರಟು ಬಿಡುವುದು ಅಜಯ್‌ಗೆ ರೂಢಿಯಾಗಿಬಿಟ್ಟಿತ್ತು.

‘ತನ್ನ ಜೀವನ ಸಾಗಿ ಬಂದ ಹಾದಿಯನ್ನೊಮ್ಮೆ ತಿರುಗಿ ನೋಡಿದರೆ ಒಂದಷ್ಟು ವರ್ಷಗಳ ಹಿಂದೆ ಈ ಬದುಕು ಹೇಗಿತ್ತು? ಎಂಥ ದಾರಿದ್ರ್ಯದಿಂದ ಕೂಡಿತ್ತು. ಇರಲೊಂದು ಸ್ವಂತ ನೆಲೆಯಿಲ್ಲದೆ ಬಾಡಿಗೆ ಕೋಣೆಯಲ್ಲಿದ್ದುಕೊಂಡು, ರಾತ್ರಿ ಹಗಲೆನ್ನದೆ ದುಡಿಯುತ್ತಾ, ಇವಳಿಂದು ಅನುಭವಿಸುವ ಸುಖದ ಸುಪ್ಪತ್ತಿಗೆಗಾಗಿ ನಾನದೆಷ್ಟು ಶ್ರಮಿಸಿದ್ದೇನೆ. ಆದರೂ ಒಂದೇ ಒಂದು ಮೆಚ್ಚುಗೆಯ ಮಾತು ಅಥವಾ ಧನ್ಯತಾ ಭಾವವನ್ನು ಯಾವತ್ತಾದರೂ ಮಾತಿನಲ್ಲಿ ಬೇಡ, ಕಣ್ಣಿನಲ್ಲಾದರೂ ಇವಳು ಸೂಚಿಸಿದ್ದಾಳೆಯೆ? ಅಂದು ನನ್ನಂಥ ಬಡವನನ್ನು ಕಟ್ಟಿಕೊಂಡು ಎರಡು ಮಕ್ಕಳನ್ನೂ ಹಡೆದು ಸಾಕಿ ಸಲಹುದಕ್ಕೆ ತಾನೂ ಕಷ್ಟಪಟ್ಟಿಳಲ್ಲ! ನೈಜ ಸಂಗಾತಿಯಾಗಿಯೂ ಅವಳು ನೀಡಿದ ಪ್ರೀತಿ, ಭದ್ರತೆ ಎಲ್ಲವೂ ನನ್ನೊಳಗೆ ಇವತ್ತಿಗೂ ಬೆಚ್ಚನೆಯ ಅನುಭವ ನೀಡುತ್ತಾ ಕುಳಿತಿವೆ. ಅದಕ್ಕಾಗಿಯೇ ಅಲ್ಲವೇ ಇನ್ನಾದರೂ ಸುಖವಾಗಿ ಬದುಕಲಿ ಎಂದುಕೊಂಡು ಅವಳು ಕೇಳಿದ್ದೆಲ್ಲವನ್ನೂ ಕಾಲ ಬುಡಕ್ಕೇ ಒದಗಿಸಿಕೊಟ್ಟು ಪ್ರೀತಿಸುತ್ತಿರುವುದು? ಇಷ್ಟಾದರೂ ಇವಳಿಂದ ಈಗೀಗ ಕಾಣುತ್ತಿರುವುದು ಬರೇ ತನ್ನ ಬಗೆಗಿನ ಸ್ವಾರ್ಥ ಮತ್ತು ಸಂಕುಚಿತ ಮನೋಭಾವ ಮಾತ್ರವಲ್ಲವೇ! ಯಾಕಿಷ್ಟೊಂದು ಬದಲಾಗಿಬಿಟ್ಟಳು...? ನನ್ನಿಂದ ಆದ ಅಪರಾಧವಾದರೂ ಏನು...? ಎಂದು ಎಷ್ಟೋ ಬಾರಿ ಸೂಕ್ಷ್ಮವಾಗಿ ಯೋಚಿಸುವಾಗಲೂ ನನ್ನ ಮನಃಸಾಕ್ಷಿಯೆಂದೂ ತನ್ನನ್ನು ದೋಷಿಯೆಂದು ಎತ್ತಿತೋರಿಸಿಯೇ ಇಲ್ಲ. ಹಾಗಾದರೆ ಇವಳೇಕೆ ಹೀಗಾಗಿಬಿಟ್ಟಳು? ಮಾನಸಿಕ ಸಮಸ್ಯೆಗೆ ಬಲಿಯಾಗುತ್ತಿದ್ದಾಳೆಯೇ...? ಛೇ!